2 ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಾವಧಿಯ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ಕೋರ್ಸುಗಳನ್ನು ಅಭ್ಯಸಿಸಿ ಉದ್ಯೋಗ ದೊರಕಿಸಿಕೊಳ್ಳಲು ಅನುಕೂಲವಾಗುವಂತೆ ವಿಶೇಷ ಪ್ಯಾರಾ ಮೆಡಿಕಲ್ ಕೋರ್ಸು ಶಿಕ್ಷಣ ವ್ಯವಸ್ಥೆಗೆ ಆದ್ಯತೆ ನೀಡುವ ಸಲುವಾಗಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳಾವುವು?

ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪಾಸಾದ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೇಲ್ಕಂಡ ಕೋರ್ಸುಗಳನ್ನು 10 ಸರ್ಕಾರಿ ಸ್ವಾಯತ್ತ ವೈದ್ಯಕೀಯ / 2 ದಂತ ಕಾಲೇಜು ಮತ್ತು ಅವುಗಳಿಗೆ ಹೊಂದಿ ಕೊಂಡಿರುವ ಆಸ್ಪತ್ರೆ ಮತ್ತು 174 ಖಾಸಗಿ ಪ್ಯಾರಾ ಮೆಡಿಕಲ್ ಸಂಸ್ಥೆಗಳ ಮೂಲಕ ಸುಮಾರು 8000 ವಿದ್ಯಾರ್ಥಿಗಳಿಗೆ ಪ್ಯಾರಾ ಮೆಡಿಕಲ್ ತರಬೇತಿಯನ್ನು ನೀಡಲಾಗುತ್ತಿದೆ.

137 ಶ್ರೀ ಹ್ಯಾರಿಸ್ ಎನ್. ಎ.(ಶಾಂತಿನಗರ) ಎಂ.ಎಲ್.ಎ
ಪ್ರೊ.ಡಾ.ಮುಮ್ತಾಜ್ ಅಲಿ ಖಾನ್, (ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.)

ಅ) ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಆಡಳಿತ ವ್ಯವಸ್ಥೆಗಾಗಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು;

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ 87 ಹುದ್ದೆಗಳು ಮಂಜೂರಾತಿಯಾಗಿದೆ, ಇದರಲ್ಲಿ 67 ಹುದ್ದೆಗಳು ಖಾಲಿ ಇರುತ್ತದೆ. ಇವುಗಳನ್ನು ಭರ್ತಿ ಮಾಡುವ ವಿಷಯವು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

ಆ) ಈ ನಿಗಮದ ಕಛೇರಿಗಳು ಎಷ್ಟು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಮತ್ತು ಉಳಿದ ಜಿಲ್ಲೆಗಳಲ್ಲಿ ನಿಗಮದ ಕಛೇರಿಗಳನ್ನು ಸ್ಥಾಪಿಸಿ ಅಭಿವೃದ್ಧಿ ಕೆಲಸಗಳನ್ನು ಜಾರಿಗೊಳಿಸಲು ಸರ್ಕಾರವು ಕ್ರಮಕೈಗೊಳ್ಳುವುದೆ;

ಮತೀಯ ಅಲ್ಪಸಂಖ್ಯಾತರು ಹೆಚ್ಚಿರುವ 07 ಜಿಲ್ಲೆಗಳಲ್ಲಿ ಈ ನಿಗಮದಿಂದ ಕಛೇರಿಯನ್ನು ತೆರೆದು ಕಾರ್ಯ ನಿರ್ವಹಿಸುತ್ತಿದೆ. ಬಾಕಿ ಉಳಿದ 22 ಜಿಲ್ಲೆಗಳಲ್ಲಿ ಕಛೇರಿಯನ್ನು ತೆರೆಯುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಕಳೆದ 5 ವರ್ಷಗಳಲ್ಲಿ ನಿಗಮಕ್ಕೆ ಸರ್ಕಾರ ನೀಡಿದ ಅನುದಾನದ ಮೊತ್ತ ಎಷ್ಟು (ವಿವರ ನೀಡುವುದು)?

ಅನುಬಂಧ 'ಅ'ದಲ್ಲಿ ಲಗತ್ತಿಸಿದೆ.

ಅನುಬಂಧ – ಅ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
ಕಳೆದ 5 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆಗಳು	2004–05	2005–06	2006–07	2007–08	2008–09
1	ಷೇರು ಬಂಡವಾಳ ಸ್ವಾವಲಂಬನ ಸಾಪ್ಟ್ ಲೋನ್ ಯೋಜನೆ	300.00	300.00	1500.00	1500.00	1800.00
2	ಸಹಾಯಧನ ಯೋಜನೆ	200.00	200.00	400.00	400.00	317.77
3	ಶ್ರಮಶಕ್ತಿ ಯೋಜನೆ	0.00	100.00	500.00	550.00	750.00
4	ಗಂಗಾ ಕಲ್ಯಾಣ ಯೋಜನೆ	500.00	800.00	2262.86	2200.00	702.23
5	ಭೂ ಖರೀದಿ ಯೋಜನೆ	0.00	0.00	200.00	200.00	200.00
6	ಮೈಕ್ರೋ ಸಾಲದ ಯೋಜನೆ	0.00	0.00	0.00	92.50	450.00
7	ಮೈಕ್ರೋ ಸಹಾಯಧನ ಯೋಜನೆ	0.00	0.00	0.00	92.50	450.00
	ಒಟ್ಟು	**1000.00**	**1400.00**	**4862.86**	**5035.00**	**4670.00**

ವ್ಯವಸ್ಥಾಪಕ ನಿರ್ದೇಶಕರು